

## ತಾರೆಯರ ಮಿತಿಯಿಲ್ಲದ ಫ್ಯಾಷನ್ ಪ್ರೀತಿ!

**ಬಾ**ಲಿವುಡ್ ತಾರೆಯರ ಗಡ್ಡ, ತಲೆಗೂದಲು, ದಿರಿಸು, ಹಚ್ಚೆ, ನಡೆಯುವ ಮತ್ತು ಮಾತನಾಡುವ ಶೈಲಿಗಳನ್ನು ಅಭಿಮಾನಿಗಳೂ ಅನುಕರಿಸುತ್ತಾರೆ. ನಟ ನಟಿಯರ ಫ್ಯಾಷನ್ ಅನ್ನು ಅನುಕರಣೆ ಮಾಡುವುದು ಅಭಿಮಾನಿಗಳಿಗೆ ಇಷ್ಟವಾದರೆ, ನಟ ನಟಿಯರು ಸಹ ಇಂತಹ ಹೊಸ ಶೈಲಿಗಳ ಬೆನ್ನತ್ತುತ್ತಾರೆ. ಆದರೆ ತಮ್ಮದೇ ಹೊಸ ಶೈಲಿ ಸೃಷ್ಟಿಸುವ ಗೋಜಿಗೆ ಹೋಗುವುದಿಲ್ಲ. ತೀರಾ 90ರ ದಶಕದ ಕಾಲಮಾನ ದವರೆಗೂ ತಾರೆಯರು ತಮ್ಮದೇ ವಿಶಿಷ್ಟ ಶೈಲಿಯ ಉಡುಗೆ ತೊಡುಗೆಗಳನ್ನು ಧರಿಸು ತ್ತಿದ್ದರು. ಅಭಿಮಾನಿಗಳಿಗೆ ಅದೇ ಖುಷಿ ಕೊಡುವ ಸಂಗತಿಯೂ ಆಗಿತ್ತು. ಆದರೆ ಜಗತ್ತಿನ ಫ್ಯಾಷನ್ ಮಂತ್ರ ಈಗ ಬದಲಾಗಿದೆ. ಫ್ಯಾಷನ್ ಜಗತ್ತು ನಿರಂತರ ಬದಲಾವಣೆಗೆ ಒಡ್ಡಿಕೊಳ್ಳುವಂಥದ್ದು. ಇಲ್ಲಿ ಯಾವ ಕಲಾವಿದನೂ ಒಂದು ನಿರ್ದಿಷ್ಟ ಶೈಲಿಯ ಕಾರಣ ಜನಪ್ರಿಯರಾಗಲು ಸಾಧ್ಯವಿಲ್ಲ. ನಟಿ, ಗಾಯಕಿ ಸೋಫಿ ಚೌಧರಿ ಪ್ರಕಾರ, ಬಾಲಿವುಡ್ ಸೆಲೆಬ್ರಿಟಿಗಳಿಗೆ ಫ್ಯಾಷನ್ ಟ್ರೆಂಡ್‌ಗಳ ಅರಿವಿದೆ. ಅವರಲ್ಲಿ ಕೆಲವೇ ಕೆಲವರು ಮಾತ್ರ ತಮ್ಮದೇ ವೈಯಕ್ತಿಕ ಶೈಲಿ ಹೊಂದಿದ್ದಾರೆ. ಚೆನ್ನಾಗಿ ಕಾಣಿಸಬೇಕು ಎಂಬ ಫ್ಯಾಷನ್ ಸೆನ್ಸ್ ಹೊಂದಿರುವ ನಟ, ನಟಿಯರು ಅದಕ್ಕಾಗಿ ಹೆಚ್ಚು ಗಮನ ಹರಿಸುತ್ತಿದ್ದಾರೆ. ಫ್ಯಾಷನ್ ಡಿಸೈನರ್‌ಗಳನ್ನು ದೇಶ ವಿದೇಶದಿಂದ ಕರೆಸಿಕೊಳ್ಳುತ್ತಿದ್ದಾರೆ. ಫ್ಯಾಷನ್ ಪೋರ್ಟಲ್‌ಗಳನ್ನು ಹೆಚ್ಚಾಗಿ ಜಾಲಾಡುತ್ತಿದ್ದಾರೆ. 'ನಾನು 10 ವರ್ಷದ ಹಿಂದೆ ಲಂಡನ್‌ನಿಂದ ಭಾರತಕ್ಕೆ ಬಂದಾಗ, ಜನ ಫ್ಯಾಷನ್ ಕುರಿತು, ಅದರಲ್ಲೂ ಸ್ಟೈಲ್ ಬಗ್ಗೆ ಹೆಚ್ಚು ಗಮನ ಕೊಡುತ್ತಿರಲಿಲ್ಲ. ಆದರೆ, ಅದೀಗ ಅತಿರೇಕಕ್ಕೆ ಹೋಗಿದೆ. ವಿಮಾನ ಪ್ರಯಾಣ ಮಾಡುವಾಗಲೂ ಸ್ಟೈಲಿಶ್ ಆಗಿ ಉಡುಪು ಧರಿಸುವ ಅಗತ್ಯವಿದೆಯೇ? ಫ್ಯಾಷನ್ ಸೆನ್ಸ್ ಮಿತಿ ಮೀರುತ್ತಿರುವುದು ಫಲ ಇದು' ಎಂದು ಮನೆಯಲ್ಲಿದ್ದಾಗಲೂ ಫ್ಯಾಷನ್ ಎಂದು ತಡಕಾಡುವ ಕಲಾವಿದರನ್ನು ಟೀಕಿಸಿದ್ದಾಳೆ ಸೋಫಿ. ಫ್ಯಾಷನ್ ಎಂದರೆ ಅಭಿವ್ಯಕ್ತಿಯ ಪ್ರಕಾರ ಎನ್ನುವುದು ಆಕೆಯ ವಿವರಣೆ.

## ಅರ್ಥವೇ ಆಗದ ಸಿನಿಮಾ!

ಬಾಲಿವುಡ್‌ನ ಖಾನ್‌ತ್ರಯರ ಪೈಕಿ ವೈವಿಧ್ಯಮಯ ಪಾತ್ರ ಮತ್ತು ತೀಕ್ಷ್ಣ ಕಥೆಯ ಸಿನಿಮಾಗಳ ಮೂಲಕ ಗಮನ ಸೆಳೆಯುವುದು ಅಮೀರ್ ಖಾನ್. ಪ್ರತಿಭೆಯಿದ್ದರೂ ಅಂತಹ ಪ್ರಯೋಗಗಳಿಗೆ ಶಾರುಖ್ ಖಾನ್ ಏಕೆ ಒಡ್ಡಿಕೊಳ್ಳುತ್ತಿಲ್ಲ ಎಂಬ ಪ್ರಶ್ನೆಗಳು ಹಲವು ಬಾರಿ ಮೂಡಿವೆ. ತನ್ನ ಏಕತಾನತೆಯ ಪಾತ್ರಗಳಿಂದ ಹೊರಗೆ ಬರಲಾಗದ ಸ್ಥಿತಿ ಶಾರುಖ್‌ನದು. ಅದನ್ನು ಮೀರುವ ಪ್ರಯತ್ನಗಳನ್ನು ಗುರುತಿಸಬಹುದಾದರೂ, ವಿಶಿಷ್ಟ ಮತ್ತು ವಿಭಿನ್ನ ಎನ್ನುವಂತಹ ಪಾತ್ರಗಳಿಗೆ ತೆರೆದುಕೊಳ್ಳುವುದು ಶಾರುಖ್‌ಗೆ ಸಾಧ್ಯವಾಗಿಲ್ಲ. ಇತ್ತೀಚೆಗೆ ಮಾನಸಿಕ ಆರೋಗ್ಯದ ಕುರಿತಾದ 'ಡಿಯರ್ ಜಿಂದಗಿ' ಚಿತ್ರದಲ್ಲಿ ತನ್ನ ಇಮೇಜುಗಳನ್ನು ಕಳಚಿಕೊಂಡ ಶಾರುಖ್ ಎಲ್ಲರಿಗೂ ಇಷ್ಟವಾಗಿದ್ದ. ಸಂವೇದನಾತ್ಮಕ ಕಥೆಗಳೊಂದಿಗೆ ಬರುವ ಹೊಸ ನಿರ್ದೇಶಕರ ಜತೆ ಕೆಲಸ ಮಾಡಲು ಉತ್ಸುಕನಾಗಿದ್ದಾನಂತೆ. ಆದರೆ ಅಂತಹ ಚಿತ್ರಗಳ ಸೌಂದರ್ಯವನ್ನು ಅರ್ಥಮಾಡಿಕೊಳ್ಳುವಲ್ಲಿ ಸೋಲುತ್ತೇನೆ ಎಂದಿದ್ದಾನೆ ಆತ.

"ಡಿಯರ್ ಜಿಂದಗಿ ಚಿತ್ರದಲ್ಲಿರುವಂತಹ ಕಥೆಯ ಆಳವನ್ನು ಅರ್ಥೈಸಿಕೊಳ್ಳಲು ಕಷ್ಟವಾಗುತ್ತದೆ. ಹಾಗಿದ್ದೂ ಆ ಬಗೆಯ ಪಾತ್ರಗಳು ಇಷ್ಟವಾಗುತ್ತವೆ. ನನ್ನ ಈ ವಯಸ್ಸಿನಲ್ಲಿ ಪ್ರೇಮಕಥೆಯನ್ನು ನೀಡಿ ಪ್ರೇಕ್ಷಕರ ಮನ ಒಲಿಸಲು ಕಷ್ಟವಾಗಬಹುದು. ನಾನು ಬಂದಿರುವುದು ವಿಭಿನ್ನ ಜಗತ್ತಿನಿಂದ. ಹೀಗಾಗಿ ಹೊಸ ನಿರ್ದೇಶಕರ ತುಡಿತ ಸಂಪೂರ್ಣ ತಿಳಿದುಕೊಳ್ಳಲು ಆಗದೇ ಇರಬಹುದು. ಆದರೂ ಅವರೊಂದಿಗೆ ಕೆಲಸ ಮಾಡುವುದು ಮುದ ನೀಡುತ್ತದೆ' ಎಂದಿದ್ದಾನೆ ಆತ. ಹೊಸ ಬಗೆಯ ಪಾತ್ರಗಳ ಅನ್ವೇಷಣೆಯ ಕಾರಣದಿಂದಲೇ 'ರಯೀಸ್'ನಂತಹ ನೆಗೆಟಿವ್ ಛಾಯೆಯ ಪಾತ್ರಕ್ಕೆ ಶಾರುಖ್ ಒಪ್ಪಿಕೊಂಡಿರುವುದು. ಖಳನಾಯಕ ವಿಜೃಂಭಿಸುವ ಮತ್ತು ವಂಚನೆಯನ್ನು ರಂಜನೆಯ ನೆಪದಲ್ಲಿ ಸಮರ್ಥಿಸಿಕೊಳ್ಳುವ ಈ ಬಗೆಯ ಸಿನಿಮಾಗಳು ಯಾವ ಸಂದೇಶ ನೀಡಬಲ್ಲವು ಎಂಬ ಪ್ರಶ್ನೆ ಹುಟ್ಟಿಸುತ್ತಲೇ, ಶಾರುಖ್ ತನ್ನ ಸುರಕ್ಷತಾ ವಲಯದಿಂದ ಹೊರ ಬರುವ ಪ್ರಯತ್ನ ನಡೆಸುತ್ತಿರುವುದನ್ನು ಸೂಚಿಸುತ್ತದೆ.

■ ಅಮಿ

